ನನ್ನಮ್ಮನ ಅಡಿಗೆ ಮನೆಗೆ ನುಗ್ಗಿ ಬಿಸಿಬಿಸಿ ಆಲೂ ಪರೋಠ ಮಾಡಿ ಮನೆಯವರಿಗೆಲ್ಲ ಬಡಿಸಿದ ಕ್ಷಣ, ಅಮ್ಮನಿಗೆ ಕೀರ್ತಿ ಅಚ್ಚುಮೆಚ್ಚಿನ ಅಳಿಯನಾಗಿದ್ದ. 'ಕೀರ್ತಿಯಂತಹ ಹುಡುಗ ಎಲ್ಲಿ ಸಿಗುತ್ತಾನೆ? ಓದಿ ಕೆಲಸ ಹಿಡಿಯೋ ನೇಮಿಗೆ ಸಹಾಯ ಮಾಡುವಂತಹ ಹುಡುಗ ಆಗಬೇಕು' ಎಂದು ಮೆಚ್ಚಿದ್ದಳು.

ನನ್ನ ಪತಿ ನನ್ನ ದೃಷ್ಟಿಯಲ್ಲಿ ಪ್ರಾಕ್ಟಿಕಲ್ ಸ್ತ್ರೀವಾದಿ! ಮನೆಯ ಯಾವ ಕೆಲಸವನ್ನು ಹಂಚಿಕೊಳ್ಳಲೂ ಅವರು ಹಿಂಜರಿದವರಲ್ಲ. ನನ್ನ ವೃತ್ತಿಯಲ್ಲಿ ನಾನು ಮೇಲೇರಿದಾಗ ಹಿಂದಕ್ಕೆಳೆದವರಲ್ಲ. ಸದಾ ನನ್ನ ಜೊತೆ ನಿಂತವರು. ಇಂತಹ ಒಂದು ಕೌಟುಂಬಿಕ ಪರಿಸರ ಸೃಷ್ಟಿಯಾಗುವಲ್ಲಿ ಪರೋಕ್ಷವಾಗಿ ಸ್ತ್ರೀವಾದಿ ಚಿಂತನೆ ಕಾರಣವಿತ್ತು.

ನಿಜ, ಇಂದು ಮಹಿಳಾ ವಿಷಯಗಳು ಬಹಳಷ್ಟು ಸಂಕೀರ್ಣವಾಗಿವೆ. 1995ರಲ್ಲಿ 'ಮಹಿಳೆ ಮತ್ತು ವಿಜ್ಞಾನ' ಎಂಬ ಲೇಖನದಲ್ಲಿ ನಾನು ಬರೆದಿದ್ದೆ 'ಹೆಣ್ಣಿನ ಗರ್ಭಕೋಶವೇ ಹಣ ಗಳಿಸುವ ಸರಕಿನ ರೂಪ ಪಡೆಯುವಾಗ, ಶ್ರೀಮಂತ ಹೆಣ್ಣುಗಳು ಬಸಿರು, ಹೆರಿಗೆಯ ರೇಜಿಗೆಗೆ ಹೋಗದೆ ಬಡ ಹೆಂಗಸರ ಗರ್ಭಕೋಶವನ್ನು ಬಾಡಿಗೆಗೆ ಪಡೆಯಬಲ್ಲ ಸಾಧ್ಯತೆಯೇ ಸ್ತ್ರೀ ಶೋಷಣೆಯ ಹೊಸರೂಪವನ್ನು ತೋರುತ್ತದೆ' ಎಂದಿದ್ದೆ. ಇದಾಗಲೆ ಸತ್ಯವಾಗಿದೆ, ಹೊಸ ಕಾನೂನುಗಳಿಗೂ ಬಿಡಿಸಲಾರದ ಸಮಸ್ಯೆಯೂ ಆಗಿದೆ.

ಆದರೆ ಇಂದು ಸಮಾಜ 'ಅವನಲ್ಲದ ಅವಳಿ'ಗೆ ಸಮಾನ ಹಕ್ಕುಗಳನ್ನು ನೀಡುವತ್ತ ಸಾಗುತ್ತಿರುವುದು ಸಮಾಧಾನದ ವಿಷಯವಾಗಿದೆ. ಸ್ತ್ರೀವಾದಿ ದೃಷ್ಟಿಕೋನ ಮಾನವತಾವಾದಕ್ಕಿಂತ ಭಿನ್ನವಲ್ಲ. 'ಹುಟ್ಟಿನಿಂದಲೇ ಒಂದು ಗುಂಪು ಇನ್ನೊಂದು ಗುಂಪಿಗಿಂತ ಶ್ರೇಷ್ಠ' ಎಂಬ ಮೂಲ ಶ್ರೇಣೀಕೃತ ವ್ಯವಸ್ಥೆಯನ್ನು ಸ್ತ್ರೀವಾದ ತಿರಸ್ಕರಿಸುತ್ತದೆ. ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳನ್ನು ಹಕ್ಕಿನಿಂದ ಕೇಳುತ್ತದೆ. ನನ್ನ ಬದುಕು ಮತ್ತು ಬರಹಗಳ ಮೇಲೆ ಪ್ರಭಾವ ಬೀರಿರುವುದು ಸ್ತ್ರೀವಾದ ಮತ್ತು ಅದರ ವಿಸ್ತರಣೆಯಾದ ಜಾತಿ, ಧರ್ಮ, ಲಿಂಗ, ವರ್ಗಗಳ ಭೇದವಿಲ್ಲದ ಮಾನವತಾವಾದ.


ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ. 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'– ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ ಖಾತೆ ಸಂಖ್ಯೆ 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್ಎಸ್‌ಸಿ ಕೋಡ್ SBIN0040006




ಚಂದಾ ವಿವರ (ಅಂಚೆ ವೆಚ್ಚ ಸೇರಿ)

ದೇಶದ ಒಳಗೆ
ವಾರ್ಷಿಕ: 300.00 (12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ 150.00 (6 ಸಂಚಿಕೆಗಳಿಗೆ)

ವಿದೇಶಗಳಿಗೆ
ವಾರ್ಷಿಕ: 1500.00 (12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ 750.00 (6 ಸಂಚಿಕೆಗಳಿಗೆ)

ಚಂದಾ ಕಳುಹಿಸುವವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು

ಪ್ರಸರಣ ವಿಭಾಗ
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್,
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560 001
ದೂರವಾಣಿ : 080–25880199, 219
ಇ-ಮೇಲ್: circulation–blore@deccanherald.co.in

